# ಕರ್ನಾಟಕ ವಿಧಾನ ಪರಿಷತ್

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 130 |
| 02. | ಮಾನ್ಯ ವಿಧಾನ ಪರಿಷತ್ ಸದಸ್ಯರ ಹೆಸರು | : | ಶ್ರೀ. ಘೋಟ್ನೆಕರ್ ಶ್ರೀಕಾಂತ್ ಲಕ್ಷ್ಮಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 03. | ಉತ್ತರಿಸುವ ದಿನಾಂಕ | : | 10-07-2018 |
| 04. | ಉತ್ತರಿಸುವ ಸಚಿವರು. | : | ಉಪ ಮುಖ್ಯ ಮಂತ್ರಿಯವರು |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಕಾರವಾರ ಜಿಲ್ಲೆಯ ಶಿರಸಿ ತಾಲ್ಲೂಕಿನಲ್ಲಿ ಬಹಳ ದಿನಗಳಿಂದ ಖೋಟಾ ನೋಟಿನ ಜಾಲ ಹಾಗೂ ಚಲಾವಣೆ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು ಆತಂಕಕ್ಕೆ ಕಾರಣವಾಗಿದ್ದು, ಇದಲ್ಲದೇ ಶಿರಸಿ ನಗರ ತುಂಬಾ ಅಮಲು ಮಿಶ್ರಿತ ಮಾತ್ರೆ ಇಂಜೆಕ್ಷನ್ ಹಾಗೂ ಔಷಧ ಮಾರಾಟ (ಗಾಂಜಾ) ಜಾಲ ಹರಡಿಕೊಂಡಿ ರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು) .</td><td>ಖೋಟಾನೋಟು ಚಲಾವಣೆ ಮತ್ತು ಮಾದಕ ವಸ್ತುಗಳ ಮಾರಾಟ ಜಾಲ ಪತ್ತೆಯಾಗಿರುವುದಿಲ್ಲ.<br><br>ಖೋಟಾನೋಟಿಗೆ ಸಂಬಂಧಿಸಿದಂತೆ ಮುಂಡಗೋಡ ಪೋಲೀಸ್ ಠಾಣೆಯಲ್ಲಿ 2016 ರಲ್ಲಿ 1 ಪ್ರಕರಣ ದಾಖಲಾಗಿರುತ್ತದೆ.<br><br>ಮಾದಕ ವಸ್ತುಗಳ ಮಾರಾಟ ಮತ್ತು ಸೇವನೆಗೆ ಸಂಬಂಧಿಸಿದಂತೆ ಈ ಕೆಳಕಂಡಂತೆ ಪ್ರಕರಣಗಳು ದಾಖಲಾಗಿರುತ್ತವೆ.<br><br><table><tr><td>ವರ್ಷ</td><td>2015</td><td>2016</td><td>2017</td><td>2018</td></tr><tr><td>ದಾಖಲಿಸಿದ ಪ್ರಕರಣಗಳು</td><td>6</td><td>15</td><td>32</td><td>6</td></tr></table></td></tr>
<tr><td>ಆ</td><td>ಸದರಿ ವಿಷಯದಲ್ಲಿ ಪೋಲೀಸ್ ಇಲಾಖೆ ಇಲ್ಲಿಯವರೆಗೆ ಯಾವ ರೀತಿ ತನಿಖೆ ಮಾಡಿದೆ ; (ಸವಿಸ್ತಾರ ವರದಿ ನೀಡುವುದು)</td><td>ಉತ್ತರ ಕನ್ನಡ ಜಿಲ್ಲೆಯಲ್ಲಿ ದಾಖಲಾದ ಖೋಟಾ ನೋಟು ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂಡಗೋಡ ಪೋಲೀಸ್ ಠಾಣೆ ಮೊ.ಸಂ. 59/2016 ಕಲಂ: 489(ಬಿ), 489(ಸಿ) ರೆ/ವಿ 34 ಐಪಿಸಿ 04 ಜನ ಆರೋಪಿತರನ್ನು ದಸ್ತಗಿರಿ ಮಾಡಲಾಗಿದ್ದು ವಶಪಡಿಸಿಕೊಂಡ 1,95,000/-ರೂಪಾಯಿ ಮೊತ್ತದ ಖೋಟಾ ನೋಟಿನ ಕುರಿತು ಸಮಗ್ರ ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪತ್ರ ಸಲ್ಲಿಸಲಾಗಿದ್ದು ವಿಚಾರಣೆಯಲ್ಲಿರುತ್ತದೆ.<br><br>ಹಾಗೂ ಮಾದಕ ದ್ರವ್ಯಗಳಿಗೆ ಸಂಬಂಧಿಸಿ 2015 ರಲ್ಲಿ ದಾಖಲಾದ 06 ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಳಿಸಿ, ದೋಷರೋಪಣೆ ಪಟ್ಟಿ ಸಲ್ಲಿಸಿದ್ದು, 06 ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ ಹಾಗೂ 2016 ರಲ್ಲಿ ದಾಖಲಾದ 15 ಪ್ರಕರಣಗಳಲ್ಲಿ 12 ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಳಿಸಿ, ದೋಷರೋಪಣೆ ಪಟ್ಟಿ ಸಲ್ಲಿಸಿದ್ದು, 12 ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿರುತ್ತದೆ. 03 ಪ್ರಕರಣಗಳು ತನಿಖೆಯಲ್ಲಿದ್ದು, ಎಫ್.ಎಸ್.ಎಲ್. ವರದಿಗಾಗಿ ಬಾಕಿ ಇರುತ್ತವೆ. ಶೀಘ್ರವಾಗಿ ತನಿಖೆ ನಡೆಸಿ ದೋಷಾರೋಪಣಾ ಪತ್ರವನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು. ಹಾಗೂ 2017 ರಲ್ಲಿ ದಾಖಲಾದ 32 ಪ್ರಕರಣಗಳಲ್ಲಿ 10 ಪ್ರಕರಣಗಳಲ್ಲಿ ತನಿಖೆ ಪೂರ್ಣಗೊಳಿಸಿ, ದೋಷರೋಪಣೆ ಪಟ್ಟಿ ಸಲ್ಲಿಸಿದ್ದು, 10 ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿರುತ್ತವೆ. 22 ಪ್ರಕರಣಗಳು ತನಿಖೆಯಲ್ಲಿದ್ದು ಎಫ್.ಎಸ್.ಎಲ್. ವರದಿಗಾಗಿ ಬಾಕಿ ಇರುತ್ತವೆ. ಮತ್ತು 2018 (ಜೂನ್ 30 ರವರೆಗೆ) ದಾಖಲಾದ 06 ಪ್ರಕರಣಗಳಲ್ಲಿ 06 ಪ್ರಕರಣಗಳು ತನಿಖೆಯಲ್ಲಿದ್ದು ಎಫ್.ಎಸ್.ಎಲ್. ವರದಿಗಾಗಿ ಬಾಕಿ ಇರುತ್ತವೆ. ಶೀಘ್ರ ತನಿಖೆಯನ್ನು ಪೂರ್ಣಗೊಳಿಸಿ ದೋಷಾರೋಪಣಾ ಪತ್ರ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು.</td></tr>
</table>

<table>
<tr>
<td>ಇ</td>
<td>ಈಗಾಗಲೇ ಜಿಲ್ಲೆಯಲ್ಲಿ ಬಹಳಷ್ಟು ಅನಧಿಕೃತ ಚಟುವಟಿಕೆ ನಡೆಯುತ್ತಿದ್ದರೂ ಪೋಲೀಸ್ ಇಲಾಖೆ ಯಾವುದೇ ಕ್ರಮ ಕೈಗೊಳ್ಳದೇ ಇರುವುದರಿಂದ ಈ ಕೃತ್ಯ ಮಾಡುತ್ತಿರು ವವರಿಗೆ ಕಡಿವಾಣ ಹಾಕುವಲ್ಲಿ ಅಧಿಕಾರಿಗಳು ವಿಫಲವಾಗಿದ್ದಾರೆಯೇ ; ಈ ವಿಷಯಕ್ಕೆ ಸಂಬಂಧಿಸಿದಂತೆ ಎಷ್ಟು ಮಂದಿ ಆರೋಪಿ ತರನ್ನು ಇಲ್ಲಿಯವರೆಗೆ ಬಂಧಿಸಲಾಗಿದೆ ಹಾಗೂ ಅವರಿಂದ ವಶಪಡಿಸಿಕೊಂಡ ವಸ್ತುಗಳ ವಿವರ ನೀಡುವುದು ;</td>
<td>ಉತ್ತರ ಕನ್ನಡ ಜಿಲ್ಲೆಯಲ್ಲಿ ಅನಧಿಕೃತ ಚಟುವಟಿಕೆಗಳನ್ನು ನಿಯಂತ್ರಿಸುವ ಕುರಿತು ಜಿಲ್ಲೆಯ ಎಲ್ಲಾ ಅಧೀನ ಅಧಿಕಾರಿಯವರಿಗೆ ಕಟ್ಟುನಿಟ್ಟಿನ ಸೂಚನೆಗಳನ್ನು ನೀಡಲಾಗಿರುತ್ತದೆ. ಅಲ್ಲದೇ ಸದರಿ ಚಟುವಟಿಕೆಗಳನ್ನು ನಿಯಂತ್ರಿಸುವ ಕುರಿತು ವಿಶೇಷ ಕಾರ್ಯಯೋಜನೆಯನ್ನು ರೂಪಿಸಿ ದಾಳಿಗಳನ್ನು ನಡೆಸಿ ಪ್ರಕರಣಗಳ ಪತ್ತೆ ಹಚ್ಚಿ ಆರೋಪಿತರ ವಿರುದ್ಧ ಮಾನ್ಯ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಲಾಗುತ್ತಿದೆ. ಪೋಲೀಸ್ ಇಲಾಖೆಯ ಯಾವುದೇ ಅಧಿಕಾರಿ/ಸಿಬ್ಬಂದಿಯವರು ಅಕ್ರಮ ಚಟುವಟಿಕೆಗಳನ್ನು ತಡೆಗಟ್ಟುವಲ್ಲಿ ವಿಫಲರಾದಲ್ಲಿ ಅಥವಾ ನಿಷ್ಕಾಳಜಿ ತೋರಿಸಿದ್ದಲ್ಲಿ ಸೂಕ್ತ ಶಿಸ್ತು ಕ್ರಮ ಜರುಗಿಸಲಾಗುತ್ತಿದೆ. ಹಾಗೂ ಅಕ್ರಮ ಚಟುವಟಿಕೆ ನಡೆಸುತ್ತಿರುವ ಕುರಿತು ಈ ಕೆಳಕಂಡಂತೆ ಅಪಾದಿತರನ್ನು ದಸ್ತಗಿರಿ ಮಾಡಿ ಕಾನೂನು ರೀತ್ಯಾ ಕ್ರಮ ಜರುಗಿಸಲಾಗಿದೆ
<table>
<tr><th>ಪ್ರಕರಣಗಳು</th><th>2015</th><th>2016</th><th>2017</th><th>ಜೂನ್ 2018ರವರೆಗೆ</th></tr>
<tr><td>ಮಟಕಾ</td><td>185</td><td>149</td><td>198</td><td>144</td></tr>
<tr><td>ಜೂಜಾಟ</td><td>682</td><td>414</td><td>468</td><td>327</td></tr>
<tr><td>ಅಕ್ರಮ ಮದ್ಯ ಮಾರಾಟ</td><td>104</td><td>122</td><td>99</td><td>115</td></tr>
<tr><td>ಎನ್‌ಡಿಪಿಎಸ್</td><td>08</td><td>27</td><td>59</td><td>11</td></tr>
</table>
</td>
</tr>
<tr>
<td>ಈ</td>
<td>ಹಳಿಯಾಳ ಪಟ್ಟಣದಲ್ಲಿ ರಾತ್ರಿ ವೇಳೆ ಜನ ವಸತಿ ಇರುವಂತಹ ಪ್ರದೇಶದಲ್ಲಿ ಮನೆಗೆ ನುಗ್ಗಿ ದರೋಡೆ ಮಾಡಿ ಮನೆಯಲ್ಲಿರುವ ಜನರಿಗೂ ಮಾರಣಾಂತಿಕ ಹಲ್ಲೆ ಮಾಡಿ ಹೋಗಿದ್ದರೂ ಇಲ್ಲಿಯವರೆಗೆ ಸಂಬಂಧಿಸಿದ ಇಲಾಖೆಯವರು ಯಾವುದೇ ರೀತಿಯಲ್ಲಿ ಕ್ರಮ ಕೈಗೊಂಡಿಲ್ಲದಿರುವುದಕ್ಕೆ ಕಾರಣಗಳೇನು ; (ಈ ಬಗ್ಗೆ ಸಂಬಂಧಿಸಿದ ಅಧಿಕಾರಿಯವರು ಇಲ್ಲಿಯವರೆಗೆ ಮಾಡಿರುವ ತನಿಖೆಯ ವಿವರ ನೀಡುವುದು).</td>
<td>ತನಿಖೆಯ ವಿವರಗಳನ್ನು <u>ಅನುಬಂಧ-1</u> ರಲ್ಲಿ ನೀಡಲಾಗಿದೆ.</td>
</tr>
<tr>
<td>ಉ</td>
<td>ಈ ರೀತಿ ನಿಷ್ಕಾಳಜಿ ವಹಿಸುತ್ತಿರುವ ಪೋಲೀಸ್ ಅಧಿಕಾರಿಗಳನ್ನು ಕೂಡಲೇ ಬೇರೆ ಕಡೆ ವರ್ಗಾವಣೆ ಮಾಡಲಾಗುವುದೇ ? (ವಿವರ ನೀಡುವುದು)</td>
<td>ಉತ್ತರ ಕನ್ನಡ ಜಿಲ್ಲೆಯಲ್ಲಿ ಯಾವುದೇ ಘಟನೆಗಳು ಜರುಗಿದಲ್ಲಿ ತಕ್ಷಣ ಘಟನಾ ಸ್ಥಳಕ್ಕೆ ಭೇಟಿ ಕೊಟ್ಟು ಸಮಗ್ರ ತನಿಖೆಗೆ ಹಾಗೂ ಆರೋಪಿತರ ಶೀಘ್ರ ದಸ್ತಗಿರಿಗೆ ನಿರ್ದೇಶನಗಳನ್ನು ನೀಡಲಾಗಿದೆ. ಹಾಗೂ ಯಾವುದೇ ಅಧಿಕಾರಿ/ಸಿಬ್ಬಂದಿ ಯವರು ಈ ಪ್ರಕರಣಗಳಲ್ಲಿ ಯಾವುದೇ ನಿಷ್ಕಾಳಜಿ ಅಥವಾ ಬೇಜವಾಬ್ದಾರಿ ತೋರಿಸಿದ್ದು ಕಂಡು ಬಂದಲ್ಲಿ ಶಿಸ್ತು ಕ್ರಮವನ್ನು ಜರುಗಿಸಲಾಗುವುದು.<br><br>ಸದರಿ ಪ್ರಕರಣಗಳಲ್ಲಿ ತನಿಖೆ ನಡೆಸುವಲ್ಲಿ ಅಧಿಕಾರಿ ಮತ್ತು ಸಿಬ್ಬಂದಿ ನಿಷ್ಕಾಳಜಿ ವಹಿಸಿರುವುದು ಕಂಡು ಬಂದಿರುವುದಿಲ್ಲ ವಾದ್ದರಿಂದ ಕ್ರಮ ಜರುಗಿಸಿರುವುದಿಲ್ಲ.</td>
</tr>
</table>

ಹೆಚ್‌ಡಿ 39 ಪಿಸಿಕ್ಯೂ 2018

(ಡಾ॥ ಜಿ.ಪರಮೇಶ್ವರ)
ಉಪ ಮುಖ್ಯ ಮಂತ್ರಿ

ಅನುಬಂಧ-1

ಹಳಿಯಾಳ ಪಟ್ಟಣದಲ್ಲಿ ವರದಿಯಾಗಿರುವ ದರೋಡೆ ಪ್ರಕರಣದ ವಿವರ ಈ ಕೆಳಗಿನಂತಿವೆ.

| ಪೊಲೀಸ್ ಠಾಣೆ ಹೆಸರು ಹಾಗೂ ಮೊಕದ್ದಮೆ ಸಂಖ್ಯೆ | ಕೃತ್ಯ ನಡೆದ ಸ್ಥಳ ಮತ್ತು ದಿನಾಂಕ | ದೋಚಿಕೊಂಡು ಹೋದ ವಸ್ತುಗಳ ವಿವರಗಳು ಮತ್ತು ಮೊತ್ತ | ಹಲ್ಲೆಗೊಳಗಾದವರ ವಿವರಗಳು | ಒಟ್ಟು ಆರೋಪಿಗಳ ಸಂಖ್ಯೆ ಮತ್ತು ವಿವರಗಳು | ಬಂಧಿಸಲ್ಪಟ್ಟ ಆರೋಪಿಗಳ ಸಂಖ್ಯೆ ಮತ್ತು ವಿವರಗಳು | ಪ್ರಕರಣದ ಪ್ರಸ್ತುತ ಹಂತ |
|---|---|---|---|---|---|---|
| ಹಳಿಯಾಳ ಪೊಲೀಸ್ ಠಾಣೆ ಸಿ.ಆರ್ ನಂ: 139/2018 ಕಲಂ: 457,392,394, 506 ಸಹಿತ 34 ಐಪಿಸಿ. | ಆನೆಗುಂದಿ ಪ್ಲಾಟ್, ಹಳಿಯಾಳ ಉತ್ತರಕ್ಕೆ 1 ಕಿ.ಮೀ ದೂರ. 12-06-2018 ರಂದು 03-15 ಗಂಟೆಯಿಂದ 3-45 ಗಂಟೆಯ ಅವಧಿಯಲ್ಲಿ | 1) ಸುಮಾರು 177 ಗ್ರಾಂ ತೂಕದ ವಿವಿಧ ನಮೂನೆಯ ಬಂಗಾರದ ಆಭರಣಗಳು ಅಂದಾಜು ಮೌಲ್ಯ 354000/- ರೂಪಾಯಿ<br>2) ಸುಮಾರು 80 ಗ್ರಾಂ ತೂಕದ ವಿವಿಧ ನಮೂನೆಯ ಬೆಳ್ಳಿಯ ಆಭರಣಗಳು ಅಂದಾಜು ಮೌಲ್ಯ 16000/- ರೂಪಾಯಿ<br>3) ಎರಡು ಪೆನೊಸೋನಿಕ್ ಮೊಬೈಲ್ ಅಂದಾಜು ಮೌಲ್ಯ 5000/- ರೂಪಾಯಿ<br>4) ಟಿವಿಎಸ್ ಸ್ಪೋರ್ಟ್ಸ್ ಬೈಕ್ (ನಂಬರ ನಮೂದಿಲ್ಲ) ಅಂದಾಜು ಮೌಲ್ಯ 25000/- ರೂಪಾಯಿ<br>5) ನಗದು ಹಣ 1200/- ರೂಪಾಯಿ<br>ಒಟ್ಟು ಮೌಲ್ಯ 4,01,200/- ರೂಪಾಯಿ | ಪಾಂಡುರಂಗ ತಂದೆ ಕೃಷ್ಣ ಅಷ್ಟಿ, ವಯಸ್ಸು: 48 ವರ್ಷ, ವೃತ್ತಿ: ಎಲ್‌ಐಸಿ ನೌಕರ ಸಾ|| ಆನೆಗುಂದಿ ಪ್ಲಾಟ್, ಹಳಿಯಾಳ. | ಯಾರೋ 4 ಜನ ಅಪರಿಚಿತರು. (ಹೆಸರು ವಿಳಾಸ ನಮೂದಿಲ್ಲ) | | ತನಿಖೆಯಲ್ಲಿ ಬಾಕಿ ಇದೆ |

ಹಳಿಯಾಳ ಪೊಲೀಸ್ ಠಾಣೆಯಲ್ಲಿ ದಾಖಲಾದ ಈ ಪ್ರಕರಣಕ್ಕೆ ಸಂಬಂಧಿಸಿ ಆರೋಪಿತರ ಪತ್ತೆಯ ಕುರಿತು ವಿಶೇಷ ತಂಡ ರಚಿಸಿ ತನಿಖೆ ನಡೆಸಲಾಗುತ್ತಿದೆ. ಘಟನಾ ಸ್ಥಳದ ಸುತ್ತಮುತ್ತಲಿರುವ ಸಿ.ಸಿ. ಕ್ಯಾಮರಾದ ದೃಶ್ಯಾವಳಿಗಳನ್ನು ಪರಿಶೀಲಿಸಲಾಗುತ್ತಿದೆ. ವೈಜ್ಞಾನಿಕವಾಗಿ ಆರೋಪಿತರ ಸುಳಿವಿನ ಕುರಿತು ಪ್ರತ್ಯಕ್ಷ ದರ್ಶಿಗಳಿಂದ ಹಾಗೂ ಸುತ್ತಮುತ್ತಲಿನ ಜನರಿಂದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.

**ದರೋಡೆಯನ್ನು ತಡೆಗಟ್ಟಲು ಕೈಗೊಂಡ ಕ್ರಮಗಳ ವಿವರಗಳು.**

1) ಹಗಲು ಬೀಟುಗಳನ್ನು ನೇಮಿಸಿ ಬೀಗ ಹಾಕಿರುವ ಮನೆಗಳ ಮಾಹಿತಿ ಸಂಗ್ರಹಿಸಿ ರಾತ್ರಿ ಗಸ್ತು ಸಿಬ್ಬಂದಿಗಳಿಗೆ ಅಂತಹ ಮನೆಗಳ ಮೇಲೆ ಕಣ್ಣಿನ ನಿಗಾ ವಹಿಸಲಾಗುತ್ತಿದೆ.

2) ಆಯಾಕಟ್ಟಿನ ಸ್ಥಳಗಳಲ್ಲಿ ಸಿ.ಸಿ ಟಿ.ವಿ ಕ್ಯಾಮರಾಗಳನ್ನು ಅಳವಡಿಸಲಾಗಿದೆ.

3) ಜನಸಂಪರ್ಕ ಸಭೆ ನಡೆಸಿ ಸಾರ್ವಜನಿಕರಿಗೆ ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಹಾಗೂ ಸಿ.ಸಿ ಟಿ.ವಿ ಗಳನ್ನು ಅಳವಡಿಸುವ ಬಗ್ಗೆ ತಿಳುವಳಿಕೆ ನೀಡಲಾಗಿದೆ.

4) ವಿಶೇಷ ತಂಡವನ್ನು ರಚಿಸಿ ಪ್ರಕರಣಗಳನ್ನು ತಡೆಗಟ್ಟುವ ಕುರಿತು ಜಿಲ್ಲೆಯ, ಹೊರಜಿಲ್ಲೆಯ ಎಂ.ಓ.ಬಿ., ಹೆಚ್.ಸ್. ಜನರನ್ನು ಮೇಲಿಂದ ಮೇಲೆ ಪರಿಶೀಲಿಸಲಾಗುತ್ತಿದೆ.

5) ರಾತ್ರಿ ಗಸ್ತು/ಹಗಲು ಗಸ್ತು ಹಾಗೂ ಲಿಂಕ್ ಬೀಟ್‌ಗಳನ್ನು ನೇಮಿಸಿ ನಗರ ಹಾಗೂ ಗ್ರಾಮೀಣ ಭಾಗಗಳಲ್ಲಿ ಮನೆ, ಅಂಗಡಿ ಹಾಗೂ ಇತರೇ ಸ್ವತ್ತುಗಳ ಮೇಲೆ ನಿಗಾ ಇಡಲಾಗುತ್ತಿದೆ.

6) ಜಿಲ್ಲೆಯಲ್ಲಿಯ ಚೆಕ್ ಪೋಸ್ಟ್‌ಗಳಲ್ಲಿ ನಾಕಾ ಬಂಧಿ ಕರ್ತವ್ಯಕ್ಕೆ ಸಿಬ್ಬಂದಿಗಳನ್ನು ನೇಮಿಸಿ ಪ್ರತಿಯೊಂದು ವಾಹನಗಳ ತಪಾಸಣೆಯನ್ನು ಕೈಗೊಳ್ಳಲಾಗುತ್ತಿದೆ.

7) ಅನುಮಾನಾಸ್ಪದವಾಗಿ ತಿರುಗಾಡುವ ಜನರು ಹಾಗೂ ವಾಹನಗಳ ಮೇಲೆ ನಿಗಾವಹಿಸಲಾಗಿದೆ.